

# ಬಾಳೆ ಗಿಡದ ನಾರಿನಿಂದ ಉಡುಪು

ಬಾಳೆಗೊನೆ ಕಡಿದ ನಂತರ ಗಿಡದ ಕಾಂಡದಿಂದ ತೆಗೆದ ನಾರಿನಿಂದ ಆಕರ್ಷಕ ಉಡುಪು ತಯಾರಿಸಬಹುದು. ಫ್ಯಾಷನಬಲ್ ಆಗಿರುವ ನಾರು ಉಡುಪು, 'ಕಸದಿಂದ ರಸ' ಎಂಬ ಪರಿಕಲ್ಪನೆಗೂ ಒತ್ತುಕೊಡುವಂತಿದೆ.

■ ಪ. ರಾಮಕೃಷ್ಣ ಶಾಸ್ತ್ರಿ

ಬಾಳೆಗೊನೆ ಕಡಿದ ಬಳಿಕ ನೆಲಕ್ಕೆ ಬೀಳುವ ಬಾಳೆ ಗಿಡದಿಂದ ತೆಗೆದ ನಾರು ಮಲ್ಲಿಗೆ ಹೂವಿನ ಮಾಲೆ ಕಟ್ಟಲು ಬಳಕೆಯಾಗುವುದು ಬಿಟ್ಟರೆ ಬಹುತೇಕ ವ್ಯರ್ಥವಾಗುತ್ತದೆ. ಶೇ. ಹತ್ತರಷ್ಟು ಮಾತ್ರ ಅದು ಸದ್ಬಳಕೆಯಾಗುತ್ತದೆ. ಆದರೆ ಈಗ ತಮಿಳುನಾಡಿನ ನೇಕಾರರ ಪ್ರಯತ್ನದ ಮೂಲಕ ಬಾಳೆಯ ನಾರಿನಿಂದ ಸೀರೆ ಮತ್ತು ಜೀನ್ಸ್ ಪ್ಯಾಂಟಿನ ಬಟ್ಟೆ ಸಿದ್ಧವಾಗುತ್ತಿದ್ದು ಬಾಳೆ ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡುವಂತೆ ಮಾಡಿದೆ.

ಚೆನ್ನೈ ವಿಮಾನ ನಿಲ್ದಾಣದಿಂದ ಒಂಬತ್ತು ಕಿ.ಮೀ. ದೂರದಲ್ಲಿ ಅಡೆಯಾರ್ ನದಿ ತೀರದಲ್ಲಿದೆ ನೇಕಾರರ ಗ್ರಾಮ ಅನಕಪುಥೂರ್. ವಿಶ್ವದಾದ್ಯಂತ ಬಟ್ಟೆ ನೇಯ್ಗೆಗೆ ಪ್ರಸಿದ್ಧಿ ಪಡೆದ ಊರು ಇದು. ಕಾಲು ಶತಮಾನದ ಹಿಂದೆ ಇಲ್ಲಿ ಐದು ಸಾವಿರ ಜೋಡಿ ಮಗ್ಗಗಳು ಬಟ್ಟೆ ನೇಯುವ ಕಾಯಕದಲ್ಲಿ ನಿರತವಾಗಿದ್ದವೆಂಬುದು ಇತಿಹಾಸ. ಈಗ ಮಗ್ಗಗಳ ಸಂಖ್ಯೆ ಮುನ್ನೂರೈವತ್ತಕ್ಕಿಳಿದಿದೆ. ಅಳಿವು ಉಳಿವಿನ ಪ್ರಶ್ನೆ ಎದುರಾದಾಗ ಜಾಗತಿಕ ಸವಾಲುಗಳನ್ನು ಮೆಟ್ಟಿ ನಿಂತು ಭಾರತೀಯ ಉತ್ಪನ್ನಗಳಿಗೆ ಬೇಡಿಕೆ ಕುದುರಿಸಲು ಇಲ್ಲಿರುವ ನೇಕಾರರು ಕಂಡುಕೊಂಡ ಹೊಸ ಶೋಧವೇ ಬಾಳೆಗಿಡದ ನಾರಿನಿಂದ ಬಟ್ಟೆ ತಯಾರಿಕೆ. ಹತ್ತಿಯ ನೂಲು ಮತ್ತು ಬಾಳೆನಾರು ಸೇರಿಸಿ ತಯಾರಾಗಿರುವ ಬಟ್ಟೆ ನಿಜವಾದ ಜೀನ್ಸಿಗಿಂತ ಗುಣಮಟ್ಟದಲ್ಲಿ ಯಾವುದೇ ಕೊರತೆ ಹೊಂದಿಲ್ಲ ಎನ್ನುವ ನೇಕಾರರು ಇದರ ವಿನ್ಯಾಸ ನೀರನ್ನು ಹೆಚ್ಚು ಹೀರಿಕೊಳ್ಳುವ ರೀತಿಯಲ್ಲಿದೆ.

